# ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶದಲ್ಲಿ ಚಿತ್ರದುರ್ಗ ಜಿಲ್ಲೆ ಮೊದಲನೇ ಸ್ಥಾನದತ್ತ ದಾಪುಗಾಲು ಯಶಸ್ವೀ 'ಕಾರ್ಯ ಯೋಜನೆ' (ಆಕ್ಷನ್ ಪ್ಲಾನ್)

ಕಳೆದ ಬಾರಿಯ ಎಸ್.ಎಸ್.ಎಲ್.ಸಿ. ಫಲಿತಾಂಶದಲ್ಲಿ ಚಿತ್ರದುರ್ಗ ಜಿಲ್ಲೆ ರಾಜ್ಯದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದು ಈ ವರ್ಷ ಪ್ರಥಮ ಸ್ಥಾನಗಳಿಸಿಕೊಳ್ಳಲು ವ್ಯವಸ್ಥಿತವಾದ **'ಕಾರ್ಯ ಯೋಜನೆ' (ಆಕ್ಷನ್ ಪ್ಲಾನ್)** ಸಿದ್ಧಪಡಿಸಿಕೊಂಡು ಕಾರ್ಯಪ್ರವೃತ್ತವಾಗಿದೆ. **2006ರಲ್ಲಿ ಶೇಕಡಾ 79.24 (4ನೇ ಸ್ಥಾನ), 2007ರಲ್ಲಿ ಶೇಕಡಾ 78.61 (10ನೇ ಸ್ಥಾನ), 2008ರಲ್ಲಿ ಶೇಕಡಾ 79.53 (2ನೇ ಸ್ಥಾನ)** ಪಡೆದ ಚಿತ್ರದುರ್ಗ ಜಿಲ್ಲೆ ಈ ಬಾರಿ ಪ್ರಥಮ ಸ್ಥಾನ ಗಳಿಸಿಕೊಳ್ಳಲು ವಿಶೇಷ ಕಾರ್ಯತಂತ್ರ ರೂಪಿಸಿದೆ.

## 1. ವಿಷಯವಾರು ಶಿಕ್ಷಕರ ಸಂಘಗಳು

ಕಳೆದ ಏಳೆಂಟು ವರ್ಷಗಳಿಂದ ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸುತ್ತಿರುವ **'ವಿಷಯವಾರು ಶಿಕ್ಷಕರ ಸಂಘ' (ಟೀಚರ್ಸ್ ಕ್ಲಬ್)**ಗಳು ಚಿತ್ರದುರ್ಗ ಜಿಲ್ಲೆಯಲ್ಲಿದ್ದು ತಮ್ಮ ತಮ್ಮ ವಿಷಯಗಳಿಗೆ ಸಂಬಂಧಿಸಿದ **'ಪ್ರಶ್ನೆ ಕೋಠಿ'**ಗಳನ್ನು, ಮಾದರಿ ಪ್ರಶ್ನೆಪತ್ರಿಕೆ ಮತ್ತು ಕೈಪಿಡಿಗಳನ್ನು ಪ್ರಕಟಿಸಿ, ವಿಷಯವಾರು ಸರಣಿ ರಸಪ್ರಶ್ನೆ ನಡೆಸಿದ್ದೇ ಅಲ್ಲದೇ ತಾಲ್ಲೂಕಾವಾರು ಶಿಕ್ಷಕರ ಸಂಘಗಳ ಮೂಲಕ ಹೋಬಳಿ ಮಟ್ಟದಲ್ಲಿ ತರಬೇತಿ ಕಾರ್ಯಾಗಾರಗಳನ್ನು ಏರ್ಪಡಿಸಿ, ಮುಖಾ-ಮುಖಿ ಚರ್ಚೆಗಳನ್ನು ನಡೆಸಿ, ವಿದ್ಯಾರ್ಥಿಗಳು ಮತ್ತು ವಿಷಯ ತಜ್ಞರೊಂದಿಗೆ ಸಂವಾದ ಕಾರ್ಯಕ್ರಮಗಳ ಮೂಲಕ ಪ್ರಶ್ನೆಪತ್ರಿಕೆಯ ನೀಲಿನಕ್ಷೆಯನ್ನು ಪರಿಚಯ ಮಾಡಿಕೊಟ್ಟದ್ದು ವಿದ್ಯಾರ್ಥಿಗಳಲ್ಲಿದ್ದ ಪರೀಕ್ಷಾ ಭಯ ನಿವಾರಿಸಿ ಆತ್ಮವಿಶ್ವಾಸ ಮೂಡಿಸುವಲ್ಲಿ ಸಫಲವಾಗಿತ್ತು. ಈಗ ಈ ಶಿಕ್ಷಕರ ಕ್ಲಬ್‌ಗಳು ತಮ್ಮದೇ **'ಬ್ಲಾಗ್'**ಗಳನ್ನು ಹೊಂದಿದ್ದು ಅವುಗಳಲ್ಲಿ ಕ್ಲಬ್ ಚಟುವಟಿಕೆಗಳು ಮತ್ತು ಪ್ರಶ್ನೆಪತ್ರಿಕೆಗಳ ಮಾದಿರಗಳನ್ನು, ಪ್ರಶ್ನೆ ಕೋಠಿಗಳನ್ನು ಅಳವಡಿಸುತ್ತಿದ್ದಾರೆ. **ಈ ರೀತಿಯ ಜಾಲತಾಣಗಳನ್ನು ಹೊಂದಿರುವ ಶಿಕ್ಷಕರ ಕ್ಲಬ್‌ಗಳು ರಾಜ್ಯದಲ್ಲಿಯೇ ಪ್ರಥಮ ಎಂಬ ಹೆಗ್ಗಳಿಕೆ ಚಿತ್ರದುರ್ಗ ಜಿಲ್ಲೆಯದು.** ಶಿಕ್ಷಣ ಇಲಾಖೆಯ ಆಯುಕ್ತರು, ಹಿರಿಯ ಅಧಿಕಾರಿಗಳು ಈ ಕಾರ್ಯವನ್ನು ಶ್ಲಾಘಿಸಿದ್ದಾರೆ. ಆಸಕ್ತರು ಈ ತಾಣಗಳನ್ನು ಗಮನಿಸಬಹುದು :

| | | |
|---|---|---|
| **ಚಿತ್ರದುರ್ಗ ಜಿಲ್ಲಾ ಕನ್ನಡ ಶಿಕ್ಷಕರ ಸಂಘ** | – | http://chitradurgakannada.blogspot.com |
| **ಚಿತ್ರದುರ್ಗ ಜಿಲ್ಲಾ ಇಂಗ್ಲಿಷ್ ಶಿಕ್ಷಕರ ಸಂಘ** | – | http://chitradurgaenglish.blogspot.com |
| **ಚಿತ್ರದುರ್ಗ ಜಿಲ್ಲಾ ಹಿಂದಿ ಶಿಕ್ಷಕರ ಸಂಘ** | – | http://chitradurgahindi.blogspot.com |
| **ಚಿತ್ರದುರ್ಗ ಜಿಲ್ಲಾ ಗಣಿತ ಶಿಕ್ಷಕರ ಸಂಘ** | – | http://chitradurgamaths.blogspot.com |
| **ಚಿತ್ರದುರ್ಗ ಜಿಲ್ಲಾ ವಿಜ್ಞಾನ ಶಿಕ್ಷಕರ ಸಂಘ** | – | http://chitradurgascience.blogspot.com |
| **ಚಿತ್ರದುರ್ಗ ಜಿಲ್ಲಾ ಸಮಾಜ ವಿಜ್ಞಾನ ಶಿಕ್ಷಕರ ಸಂಘ** | – | http://chitradurgasocialscience.blogspot.com |
| **ಚಿತ್ರದುರ್ಗ ಜಿಲ್ಲಾ ದೈಹಿಕ ಶಿಕ್ಷಕರ ಸಂಘ** | – | http://chitradurgaphysicaleducation.blogspot.com |
| **ಚಿತ್ರದುರ್ಗ ಜಿಲ್ಲಾ ಕರಕುಶಲ ಶಿಕ್ಷಕರ ಸಂಘ** | – | http://chitradurgacraft.blogspot.com |
| **ಚಿತ್ರದುರ್ಗ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಛೇರಿ** | – | http://chitradurgaddpi.blogspot.com |
| **ಚಿತ್ರದುರ್ಗ ಜಿಲ್ಲಾ ಸರ್ವ ಶಿಕ್ಷಾ ಅಭಿಯಾನ ಯೋಜನೆ** | – | http://chitradurgassa.blogspot.com |

....2

**2. ಸರಣಿ ಪೂರ್ವಸಿದ್ಧತಾ ಪರೀಕ್ಷೆಗಳು:**

ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ಎಲ್. ರಂಗಪ್ಪ, ಸರ್ವಶಿಕ್ಷಾ ಅಭಿಯಾನ ಯೋಜನೆಯ ಉಪಯೋಜನಾ ಸಮನ್ವಯಾಧಿಕಾರಿ ಶ್ರೀ ಕೆ.ಪಿ. ಲೋಹಿತೇಶ್ವರ ರೆಡ್ಡಿ, ಶಿಕ್ಷಣಾಧಿಕಾರಿ ಶ್ರೀ ಎಸ್.ಕೆ.ಬಿ. ಪ್ರಸಾದ್ ಮತ್ತು ಶ್ರೀ ಎನ್.ಎಂ. ರಮೇಶ್, ವಿವಿಧ ವಿಷಯಗಳ ವಿಷಯ ಪರಿವೀಕ್ಷಕರು ಹಾಗೂ ಮುಖ್ಯಶಿಕ್ಷಕರ ಸಂಘಗಳು ಸಂಯುಕ್ತವಾಗಿ ಕಳೆದ ಕೆಲವು ವರ್ಷಗಳಲ್ಲಿ ನಡೆಸಿದಂತೆ ಮೂರು ಜಿಲ್ಲಾಮಟ್ಟದ ಸರಣಿ ಪೂರ್ವಸಿದ್ಧತಾ ಪರೀಕ್ಷೆಗಳು ಮತ್ತು ಒಂದು ರಾಜ್ಯಮಟ್ಟದ ಪರೀಕ್ಷೆ ನಡೆಸಲು ಸಿದ್ಧರಾಗಿದ್ದಾರೆ.

**3. ಆಕಾಶವಾಣಿಯ ಪರೀಕ್ಷಾ ಸಿದ್ಧತೆ – ನೇರ ಫೋನ್–ಇನ್–ಕಾರ್ಯಕ್ರಮಗಳು :**

ಕಳೆದ ಆರು ವರ್ಷಗಳಿಂದ ಚಿತ್ರದುರ್ಗ ಆಕಾಶವಾಣಿ ಕೇಂದ್ರ ನಡೆಸಿಕೊಂಡುಬರುತ್ತಿರುವ **"ಸಮುದಾಯದತ್ತ ಶಿಕ್ಷಣ – ನೇರಫೋನ್ ಇನ್ ಕಾರ್ಯಕ್ರಮ"**ಗಳು ಇದೇ ಏಪ್ರಿಲ್ ಮೊದಲ ಭಾನುವಾರದಿಂದ ಆರಂಭಗೊಂಡಿದ್ದು ಪ್ರತಿವಾರವೂ ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳು, ವಿಷಯ ತಜ್ಞರು, ಸಂಪನ್ಮೂಲ ವ್ಯಕ್ತಿಗಳ ಜೊತೆ ನಡೆಸುವ ನೇರ ಸಂವಾದ ಕಾರ್ಯಕ್ರಮ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರನ್ನು ಶಿಕ್ಷಣಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಜಾಗೃತರನ್ನಾಗಿಸಿದೆ. ಈ ವರ್ಷವೂ **"ಎಸ್.ಎಸ್.ಎಲ್.ಸಿ. ಪರೀಕ್ಷಾ ಸಿದ್ಧತೆ – ನೇರ ಫೋನ್ ಇನ್ ಕಾರ್ಯಕ್ರಮ'** ಡಿಸೆಂಬರ್‌ನಿಂದ ಮಾರ್ಚ್‌ವರೆಗೆ ಮೂಡಿಬರಲಿದೆ. ಸುತ್ತಮುತ್ತಲ ಸುಮಾರು 11 ತಾಲ್ಲೂಕುಗಳ ವಿದ್ಯಾರ್ಥಿಗಳು ಭಾನುವಾರ ಬೆಳಗ್ಗೆ 9.00 ರಿಂದ 9.30ರವರೆಗೆ ಆಕಾಶವಾಣಿಗೆ ಫೋನ್ ಮಾಡಿ ವಿಷಯತಜ್ಞರೊಂದಿಗೆ ನೇರ ಸಂವಾದ ನಡೆಸಿ ಪ್ರಶ್ನೆ ಪತ್ರಿಕೆಗೆ ಮತ್ತು ಕ್ಲಿಷ್ಟವಿಷಯಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರ ಪಡೆಯಬಹುದು. ಈ ಸಂವಾದ ಕಾರ್ಯಕ್ರಮವನ್ನು ಕೇಳಲು ಶಿಕ್ಷಣ ಇಲಾಖೆ ಶಾಲೆಗಳಿಗೆ ಪ್ರತ್ಯೇಕ ರೇಡಿಯೋಗಳನ್ನು ಕೊಳ್ಳುವಂತೆ ಆದೇಶಿಸಿದೆ ಮತ್ತು ಆಯಾ ದಿನಗಳಂದು ಶಾಲೆಯಲ್ಲಿ ಸೇರಿ ಒಟ್ಟಿಗೇ ಕೇಳುವಂತೆ, ಕಾರ್ಯಕ್ರಮದಲ್ಲಿ ಶಾಲೆಯ ಇಲ್ಲವೇ ಶಿಕ್ಷರ ಫೋನ್ ಬಳಸಿ ಮಾತನಾಡಲೂ ಅವಕಾಶ ಮಾಡಿಕೊಟ್ಟಿದೆ. ಪರೀಕ್ಷೆಗಳ ಸಂದರ್ಭದಲ್ಲಿ ಮಕ್ಕಳಿಗೆ ಏನಾದರೂ ತೊಂದರೆ ಎದುರಾದರೆ ಸಹಾಯವಾಣಿ ಮೂಲಕ ನೆರವು ನೀಡಲು ವ್ಯವಸ್ಥೆ ಮಾಡಿದೆ.

**4. ಶಾಲೆಗಳ ವಿಶೇಷ ಕೋಚಿಂಗ್ ಶಿಬಿರಗಳು:**

**'ನಮ್ಮ ಶಾಲೆಯ ವಿದ್ಯಾರ್ಥಿಗಳು ಅತಿ ಹೆಚ್ಚು ಅಂಕಗಳಿಸಬೇಕು, ನೂರಕ್ಕೆ ನೂರು ಫಲಿತಾಂಶ ಬರಬೇಕು'** ಎಂದು ಚಿತ್ರದುರ್ಗದ ಬಹುತೇಕ ಎಲ್ಲಾ ಶಾಲೆಗಳ ಮುಖ್ಯಸ್ಥರು ತಾವಾಗಿಯೇ ಎಸ್.ಎಸ್.ಎಲ್.ಸಿ. ತರಗತಿಗಳನ್ನು ಒಂದು ತಿಂಗಳು ಮುಂಚಿತವಾಗಿಯೇ ಆರಂಭಿಸಿ ವಿಶೇಷ ಕೋಚಿಂಗ್ ನೀಡುತ್ತಿದ್ದಾರೆ.

ಶಿಕ್ಷಣ ಇಲಾಖೆಯು ಶೇಕಡಾ ನೂರು ಫಲಿತಾಂಶ ಪಡೆದ ಶಾಲೆಗಳ ಶಿಕ್ಷಕ ಬಂಧುಗಳನ್ನು ಸನ್ಮಾನಿಸಿ ಉಳಿದ ಶಾಲೆಗಳು ಇದೇ ರೀತಿ ಮುಂದುವರೆಯಲು ಹುರಿದುಂಬಿಸಿದ್ದು ಮೊದಲ ಸ್ಥಾನಕ್ಕೆ ಪೈಪೋಟಿ ನೀಡುವಂತೆ ವಿದ್ಯಾರ್ಥಿಗಳನ್ನು ಸಿದ್ಧರನ್ನಾಗಿಸಲು ಪ್ರೇರೇಪಿಸುತ್ತಿದೆ. ಇಷ್ಟೆಲ್ಲಾ ಸಿದ್ಧತೆ, ಕಾರ್ಯಯೋಜನೆ, ಹಾಕಿಕೊಂಡಿರುವ ಚಿತ್ರದುರ್ಗ ಜಿಲ್ಲೆ ಈ ವರ್ಷ ಮೊದಲ ಸ್ಥಾನ ಪಡೆದುಕೊಳ್ಳಲು ಪೈಪೋಟಿ ನಡೆಸುತ್ತಿದೆ. ಇದೇ ಮಾದರಿಯನ್ನು ಬೇರೆ ಜಿಲ್ಲೆಗಳೂ ಅನುಸರಿಸಿ, ಅಗತ್ಯ ಬದಲಾವಣೆಗಳನ್ನು ಮಾಡಿಕೊಂಡು ಉನ್ನತ ಸ್ಥಾನಗಳಿಸಿಕೊಳ್ಳಬಹುದು, ಅಲ್ಲವೇ?

**– ಬೇದ್ರೆ ಮಂಜುನಾಥ**

**ವಿಳಾಸ: ಪ್ರಸಾರ ನಿರ್ವಾಹಕರು, ಆಕಾಶವಾಣಿ, ಚಿತ್ರದುರ್ಗ – 577 501, ಫೋ.:9448589089**

**ಬೇದ್ರೆ ಪ್ರತಿಷ್ಠಾನ – ಅನೌಪಚಾರಿಕ ಶಿಕ್ಷಣ, ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಚಿತ್ರದುರ್ಗ**